ಡಚ್ ನೆರವಿನಲ್ಲಿ ಒದಗಿಸಿದ ಸಾಲ ಸೌಲಭ್ಯಗಳು

		ಫಲಾನುಭವಿಗಳು	ರೂಪಾಯಿಗಳಲ್ಲಿ
೧	ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಎ)	೧	೪೭,೮೦೦–೦೦
೨	ವಾಸ ಮತ್ತು ರೀಲಿಂಗ್ ಷಡ್ (ಮಾದರಿ ಬಿ)	೧	೪೨,೩೫೦–೦೦
೩	ರೀಲಿಂಗ್‌ಷಡ್	೧	೨೪,೫೦೦–೦೦
೪	ವಾಸ ಮತ್ತು ಹುಳು ಸಾಕುವ ಮನೆ	೪	೭೬,೮೦೦–೦೦
೫	ಹುಳು ಸಾಕುವ ಮನೆ	೬	೯೭,೨೦೦–೦೦
	ಒಟ್ಟು	೧೩	೨,೮೮,೬೫೦–೦೦

ಇಲಾಖೆಯ ಚಾಕಿ ಸಾಕಾಣಿಕೆ ಕೇಂದ್ರ ಹೆಚ್. ರಂಗಾಪುರ ರೂ. ೫೩,೦೦೪–೦೦

ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಸಿಮೆಂಟ್ ಕಾರ್ಖಾನೆ ಆರಂಭವಾಗುವ ಬಗ್ಗೆ

೧೫೨. ಶ್ರೀ ಜಿ. ರಾಮದಾಸ್.—ಮಾನ್ಯ ಭಾರಿ ಪರಿಸರ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕು ಮುತ್ತೋಡು ಹೋಬಳಿಯಲ್ಲಿ ಆರಂಭವಾಗಲಿರುವ ಸಿಮೆಂಟ್ ಕಾರ್ಖಾನೆಯಿಂದ ತೆಂಗಿನ ಬೆಳೆ ಹಾಗೂ ರೈತರಿಗೆ ಹಾನಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅಪಾರ ತೆಂಗಿನ ವನದ ಮಧ್ಯೆ ಧೂಳುಕಾರುವ ಸಿಮೆಂಟ್ ಕಾರ್ಖಾನೆಯ ಆರಂಭಕ್ಕೆ ಸರ್ಕಾರದವರು ಅನುಮತಿ ನೀಡಿರುವುದು ಸರಿಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಹಾನಿಯಾಗದಂತೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು ?

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಈ ಪ್ರದೇಶದಲ್ಲಿ ಕಾರ್ಖಾನೆಗಳು ಚಿಕ್ಕ ಪ್ರಮಾಣದಾಗಿದ್ದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರವಾನಿಗೆ ಪಡೆದಿವೆ. ಮತ್ತು ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸೂಚಿಸಿರುವ ಕ್ರಮಗಳನ್ನು ಕೈಗೊಂಡಿದ್ದಾರೆ.

ಆ) ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಮನ್ನಣೆ ಪಡೆದ ನಂತರವೇ ಕೈಗಾರಿಕೆಗಳಿಗೆ ಅನುಮತಿ ನೀಡಿದೆ.

ಇ) ಸ್ಥಳೀಯ ಗಣ್ಯ ನಾಗರೀಕರು ಮತ್ತು ಉದ್ದಿಮೆದಾರರ ನಡುವೆ ಆಗಿರುವ ಒಪ್ಪಂದದ ಪ್ರಕಾರ ಉದ್ದಿಮೆದಾರರು ಸ್ಥಳೀಯ ಪಂಚಾಯಿತಿಗೆ ಪ್ರತಿ ವರ್ಷವೂ ಪರಿಹಾರ ಧನವನ್ನು ನೀಡುವುದೂ ಅಲ್ಲದೆ ತೆಂಗಿನ ಬೆಳೆಗೆ ಹಾನಿಯಾದ ಪಕ್ಷದಲ್ಲಿ ಒಪ್ಪಂದದ ಪ್ರಕಾರ ಪರಿಹಾರವಾಗಿ ಧನವನ್ನು ನೀಡುತ್ತದೆ.

ನಂದಿ ಹೆಸ್ಸಿ ಟೆಕ್ಸ್‌ಟೈಲ್ಸ್ ಬಗ್ಗೆ

೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ).— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.–

ಅ) ನಂದಿ ಮತ್ತು ಹೆಸ್ಸಿ ಟೆಕ್ಸ್‌ಟೈಲ್ ಮಿಲ್ಸ್ ಲಿ. ನರಗುಂದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಇಂಡಸ್ಟ್ರಿಯಲ್ ಅಂಡರ್‌ಟೇಕಿಂಗ್ ಕಾನೂನಿನ ೪(೨)ನೇ ವಿಧಿಯ ಅನ್ವಯ ಒಂದು ಪ್ರಕಟನೆ ಹೊರಡಿಸಿರುವುದು ನಿಜವೆ ?